ಭಾರತದ ಸರ್ವೋಚ್ಚ ನ್ಯಾಯಾಲಯದ ಮುಂದೆ ಅನುಕ್ರಮವಾಗಿ ಒಂದು ಮೂಲ ದಾವೆ (Original Suit) ಹಾಗೂ ವಿಶೇಷ ಅನುಮತಿ ದಾವೆ (Special Leave Petition) ಅನ್ನು ಮೊದಲು ದಾಖಲಿಸಿ ಅನಂತರ ಅಂತರ ರಾಜ್ಯ ಜಲ ವಿವಾದ ಕಾಯ್ದೆಯ ಸೆಕ್ಷನ್ 5(3)ರ ಅಡಿ ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಲು ಸರ್ಕಾರವು ನಿರ್ಧರಿಸಿರುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1177(1398)**
ಮಾನ್ಯ ಸದಸ್ಯರ ಹೆಸರು **ಶ್ರೀ ಬಸವರಾಜ್ ರಾಯರೆಡ್ಡಿ (ಯೆಲಬುರ್ಗಾ)**
ಉತ್ತರಿಸುವ ಸಚಿವರು **ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) 2006–07ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಮವಸ್ತ್ರ ಹಾಗೂ ಪುಸ್ತಕಗಳನ್ನು ವಿತರಿಸಲಾಗುತ್ತಿದೆಯೇ,

ವಿತರಿಸಲಾಗಿದೆ

ಆ) ಇದಕ್ಕಾಗಿ ಸರ್ಕಾರವು ಒದಗಿಸಿರುವ ಅನುದಾನವೆಷ್ಟು,

ಉಚಿತ ಸಮವಸ್ತ್ರಕ್ಕಾಗಿ ರೂ 54 95 ಕೋಟಿಗಳನ್ನು ಯೋಜನೆಯಡಿಯಲ್ಲಿ, ಉಚಿತ ಪಠ್ಯ ಪುಸ್ತಕಕ್ಕಾಗಿ ರೂ 21 60 ಕೋಟಿಗಳನ್ನು ಯೋಜನೇತರದಡಿ ಒದಗಿಸಲಾಗಿದೆ

ಇ) ಸಮವಸ್ತ್ರ ವಿತರಣೆಗೆ ಅನುಸರಿಸಲಾಗುವ ಮಾರ್ಗೋಪಾಯವೇನು,

ವಿದ್ಯಾವಿಕಾಸ ಯೋಜನೆಯಡಿ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಒಂದು ಜೊತೆ ಉಚಿತ ಸಮವಸ್ತ್ರಗಳನ್ನು ಕರ್ನಾಟಕ ಕೈ ಮಗ್ಗ ನಿಗಮ ನಿಯಮಿತ ಮತ್ತು ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ನಿಗಮ ನಿಯಮಿತ ಸಂಸ್ಥೆಗಳಿಗೆ ವಹಿಸಿದ್ದು, ಆ ಸಂಸ್ಥೆಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸರಬರಾಜು ಮಾಡುವರು ಅಲ್ಲಿಂದ ಅದನ್ನು ಶಾಲಾಹಂತದಲ್ಲಿ ವಿದ್ಯಾರ್ಥಿಗಳಿಗೆ ಇಲಾಖೆಯು ಹಂಚುವುದು

ಈ) ಪಠ್ಯ ಪುಸ್ತಕಗಳ ಮುದ್ರಣಕ್ಕೆ ಅನುಸರಿಸಲಾಗುವ ಕ್ರಮಗಳೇನು,

ಪಠ್ಯ ಪುಸ್ತಕಗಳನ್ನು ಸರ್ಕಾರಿ ಮುದ್ರಣಾ ಇಲಾಖೆಯ ಮುಖಾಂತರ ಮುದ್ರಿಸುತ್ತದೆ

ಉ) ಇದು ಸರಿಯಾದ ಸಮಯಕ್ಕೆ ಎಲ್ಲಾ ಶಾಲೆಗಳಿಗೂ ವಿತರಣೆ ಮಾಡಲು ಸರ್ಕಾರವು ಅನುಸರಿಸಲಾದ ಕ್ರಮವೇನು?

ಸರ್ಕಾರದ ಹಂತದಲ್ಲಿ ಪ್ರತಿವಾರ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತ ಸಮವಸ್ತ್ರಗಳನ್ನು ಹಾಗೂ ಪಠ್ಯ ಪುಸ್ತಕಗಳನ್ನು ವಿತರಿಸಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1179(1594)**

ಮಾನ್ಯ ಸದಸ್ಯರ ಹೆಸರು **ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)**

ಅ) ಚಾಮರಾಜನಗರ ಜಿಲ್ಲೆಯಲ್ಲಿ ಉಪ್ಪಾರ ಬಡಾವಣೆಗಳು ಗುಡಿಸಲುಗಳ ಆಗರವಾಗಿರುವುದು ಸರ್ಕಾರದ ಗಮನದಲ್ಲಿದೆಯೇ?

ಹೌದು

ಆ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ಉಪ್ಪಾರ ಬಡಾವಣೆ ಹಿಂಭಾಗದ ಪ್ರದೇಶ, ಕೊಳ್ಳೇಗಾಲ ಪಟ್ಟಣದಲ್ಲಿರುವ ಉಪ್ಪಳಗೇರಿ ಮೋಳೆ ಪ್ರದೇಶ ಮತ್ತು ಯಳಂದೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಳೇಪೇಟೆ ಉಪ್ಪಾರ ಬೀದಿ ಕೊಳಚೆ ಪ್ರದೇಶಗಳನ್ನು ಮಂಡಳಿಯ ಕಾಯ್ದೆಯಡಿ ಕೊಳಚೆ ಪ್ರದೇಶಗಳೆಂದು ಘೋಷಿಸಿ ಈಗಾಗಲೇ ಸದರಿ ಪ್ರದೇಶಗಳಲ್ಲಿ ಮಂಡಳಿಯ ವತಿಯಿಂದ ಅನುಧಾನದ ಲಭ್ಯತೆ ಆಧರಿಸಿ ರೂ 4,42,148 090ಗಳ ವೆಚ್ಚದಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ

1) 10 ಸೀಟರಿನ ಶೌಚಾಲಯ
2) ಬಾಕ್ಸ್ ಚರಂಡಿ
3) ಜಲ್ಲಿ ರಸ್ತೆ
4) ಡೆಕ್ ಸ್ಲಾಬ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1181(1597)**

ಮಾನ್ಯ ಸದಸ್ಯರ ಹೆಸರು **ಶ್ರೀ ಆರ್ ಧ್ರುವನಾರಾಯಾಣ (ಸಂತೆಮಾರಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಬದನಾಳು ಏತ ನೀರಾವರಿ ಯೋಜನೆಯನ್ನು ಇದುವರೆವಿಗೂ ಕಾರ್ಯಗತಗೊಳಿಸದಿರುವುದು ಸರ್ಕಾರದ ಗಮನದಲ್ಲಿದೆಯೇ,

ಹೌದು